ಡಾ. ಸಿ. ಸೋಮಶೇಖರ ಭಾ.ಆ.ಸೇ.(ನಿ)
ಅಧ್ಯಕ್ಷರು
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಫೆಡರೇಷನ್ ಹೌಸ್, ಎಫ್‌ಕೆಸಿಸಿಐ ಕಟ್ಟಡ
3ನೇ ಮಹಡಿ, ಕೆಂಪೇಗೌಡ ರಸ್ತೆ,
ಬೆಂಗಳೂರು - 560 009.
ದೂರವಾಣಿ : 080-22356626
ಮೊಬೈಲ್ : +91 9880191228
ಇಮೇಲ್ : kbada6666@gmail.com
drcsomasekhara9@gmail.com

ಕ್ರ.ಸಂ:ಕಗಪ್ರಅಪ್ರಾ/41/ಆ/2021-22 ದಿನಾಂಕ: 18-11-2021

ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ರವರು,
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

ಸನ್ಮಾನ್ಯರೇ,

**ವಿಷಯ:-** ಕಾಸರಗೋಡು ಜಿಲ್ಲೆಯಲ್ಲಿ ಅಕ್ಷಯ ಕೇಂದ್ರದ ಮೂಲಕ ವಿತರಿಸಲಾದ ಪಡಿತರ ಚೀಟಿ ಹಾಗೂ ಮುಂತಾದ ಗುರುತಿನ ಚೀಟಿಗಳಲ್ಲಿ ಕನ್ನಡ ಭಾಷೆಯನ್ನು ಸಹಾ ಮುದ್ರಿಸಲು ಕೇರಳ ಸರ್ಕಾರದ ಗಮನಕ್ಕೆ ತರುವ ಬಗ್ಗೆ ಮನವಿ.

**ಉಲ್ಲೇಖ:-** 1) ಭಾರತ ಸರ್ಕಾರದ ಅಲ್ಪ ಸಂಖ್ಯಾತರ ಇಲಾಖೆಯ ಪತ್ರ ದಿನಾಂಕ:09-09-2021.
2) ಕೇರಳ ರಾಜ್ಯದ ಆಹಾರ ಸಚಿವರು ಮತ್ತು ಕಾಸರಗೋಡು ಜಿಲ್ಲಾಧಿಕಾರಿಗಳಿಗೆ ಬರೆದ ನನ್ನ ಪತ್ರ ದಿನಾಂಕ: 16-11-2021.

* * * * *

ಈ ಮೂಲಕ ನಾನು ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ಹೊಸ ಪಡಿತರ ಚೀಟಿಗಳನ್ನು ಅಕ್ಷಯ ಕೇಂದ್ರದ ಮೂಲಕ ಮುದ್ರಿಸಿ ವಿತರಿಸಲಾಗುತ್ತಿದ್ದು, ಈ ಪಡಿತರ ಚೀಟಿಗಳನ್ನು ಕೇವಲ ಮಲಯಾಳಿ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ಮುದ್ರಿಸಲಾಗುತ್ತಿದೆ.

ಈ ಹಿಂದೆ ಇನ್ನಿತರ ಪಡಿತರ ಚೀಟಿಗಳಲ್ಲಿ ಮಲಯಾಳಿ ಭಾಷೆಯ ಜೊತೆಗೆ ಕನ್ನಡ ಭಾಷೆಯನ್ನೂ ಸಹ ಮುದ್ರಿಸಲಾಗುತ್ತಿತ್ತು. ಶೇ.95 ರಷ್ಟು ಕನ್ನಡ ಮಾತನಾಡುವ ಜನರಿರುವ ಕಾಸರಗೋಡು ಜಿಲ್ಲೆಯಲ್ಲಿ ಅಧಿಕವಾಗಿ ಕನ್ನಡ ಭಾಷೆಯನ್ನು ಅಲ್ಲಿನ ಜನತೆ ಉಪಯೋಗಿಸುತ್ತಿದ್ದಾರೆ.

ಉಲ್ಲೇಖ ೧ ರಲ್ಲಿ ಪ್ರಸ್ತುತ ವಿಚಾರಕ್ಕೆ ಸಂಬಂಧಪಟ್ಟಂತೆ ಕೇಂದ್ರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಮಹಾರಾಷ್ಟ್ರ ಸರ್ಕಾರಕ್ಕೆ ಸೂಚನೆಯನ್ನು ನೀಡಿ ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಜಿಲ್ಲೆಯಲ್ಲಿ ಇರುವ ಕನ್ನಡ ಪ್ರದೇಶಗಳಲ್ಲಿ ಸಂವಿಧಾನದ ಆಶಯಗಳ ಪ್ರಕಾರ ಕನ್ನಡ ಭಾಷೆಯನ್ನೇ ಉಪಯೋಗಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ರೇಷನ್ ಕಾರ್ಡ್ / ಗುರುತಿನ ಚೀಟಿ / ಗ್ರಾಮ ಪಂಚಾಯತಿಗಳಲ್ಲಿ ನೀಡುವ ವಿವಿಧ ದಾಖಲೆಗಳನ್ನು ಇತರ ಭಾಷೆಯ ಜೊತೆಗೆ ಕನ್ನಡ ಭಾಷೆಯನ್ನು ಸೇರಿಸಿ ಮುದ್ರಿಸಿ ನೀಡಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವಂತೆ ಕೇರಳ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಪತ್ರವೊಂದನ್ನು ಬರೆಯಲು ತಮ್ಮಲ್ಲಿ ವಿನಂತಿಸಿದೆ. ಕೇರಳ ಸರ್ಕಾರದ ಆಹಾರ ಸಚಿವರಿಗೆ ಹಾಗೂ ಕಾಸರಗೋಡು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಬರೆದ ಪತ್ರದ ಪ್ರತಿಯೊಂದಿಗೆ ಉಲ್ಲೇಖ ೧, ೨ ಹಾಗೂ ಮಾದರಿ ರೇಷನ್ ಕಾರ್ಡನ್ನೂ ಸಹ ಈ ಪತ್ರದೊಂದಿಗೆ ತಮ್ಮ ಅವಗಾಹನೆಗಾಗಿ ಲಗತ್ತಿಸಿದೆ.

ಇಂತಿ ಗೌರವ ಪೂರ್ವಕ ವಂದನೆಗಳು,

ತಮ್ಮ ವಿಶ್ವಾಸಿ,

[ಡಾ.ಸಿ. ಸೋಮಶೇಖರ, ಭಾ.ಆ.ಸೇ(ನಿ)]
ಅಧ್ಯಕ್ಷರು